ದಿನಾಂಕ: 17.06.2025

ಅಸಲುದಾವೆ: 37/2015

ಡಿ.ಡಬ್ಲ್ಯೂ: 5

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ವಕೀಲರಿಂದ:

ನಾನು ಸುಮಾರು 10-15 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ಹಳೆ ಹಳ್ಳಿ ಗ್ರಾಮದ ಜನ ನನಗೆ ಗೊತ್ತು. ಲಿಂಗ ಅಲಿಯಾಸ್ ಮೊಳ್ಳೆ, ಅಣ್ಣಯ್ಯ, ನಂಜೇಗೌಡ ಮತ್ತು ನಿಂಗ ಇವರು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅವರ ಮಕ್ಕಳು ಯಾರಾದರು ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ನಾಲ್ಕು ಕೇಸುಗಳನ್ನು ಹಾಕಿರುವ ವಾದಿಗು ಗೊತ್ತಾ ಎಂದರೆ ಸಾಕ್ಷಿ ಅವರ್ಯಾರೂ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕೇಸು ಹಾಕಿರುವ ವಾದಿಯರೆಲ್ಲರೂ ಹಳ್ಳಿ ಹಳ್ಳಿ ಗ್ರಾಮದವರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷ್ಯಾ ನುಡಿಯಲು ಬಂದಿದ್ದೀರಿ ಯಾರು ಕೇಸು ಹಾಕಿದ್ದಾರೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಮ್ಮ ಪಕ್ಕದ ಜಮೀನಿನವರು ಎಂದು ಉತ್ತರಿಸುತ್ತಾರೆ. ಇವರು ಏನು ಕೇಸು ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಸರ್ವೆ ನಂ.6 ಸರ್ವೆನಂ.7 ಆಗಿದೆ ಎಂದು ಕೇಸು ಹಾಕಿದ್ದಾರೆ ಎಂದು ತಿಳಿದುಕೊಂಡಿದಿದ್ದೇನೆ ಎಂದು ಉತ್ತರಿಸುತ್ತಾರೆ. 2014 ರಿಂದ ಈಚೆಗೆ ಸರ್ವೆ ನಂ.6 ಸರ್ವೆ ನಂ.7 ಆಗಿದೆ. 1911 ಕ್ಕಿಂತ ಹಿಂದೆ ಸರ್ವೆ ನಂ.7 ಇದ್ದ ದಾಖಲಾತಿಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಯಾವ ದಾಖಲಾತಿಗಳನ್ನು ನೋಡಿದ್ದೀರಿ ಎಂದರೆ ಸಾಕ್ಷಿ ಆರ್.ಆರ್., ಇಂಡೆಕ್ಸ್, ಕೈ ಬರವಣಿಗೆ ಆರ್.ಟಿ.ಸಿ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದ ದಾಖಲಾತಿಗಳು 15 ವರ್ಷ ಹಿಂದಿನ ದಾಖಲಾತಿಗಳು. ಆ ದಾಖಲಾತಿಗಳು 114 ವರ್ಷ ಹಿಂದಿನ ದಾಖಲಾತಿಗಳಲ್ಲ ಎಂದರೆ ಸಾಕ್ಷಿ ಇದ್ದವು ನಂತರ ಚೆಂಜ್ ಆಗುತ್ತಾ ಬಂದಿವೆ ಎಂದು ಉತ್ತರಿಸುತ್ತಾರೆ. ಇಸ್ಸಾ ಸರ್ವೆ ಯಾವ ಇಸವಿಯಲ್ಲಿ ಆಯಿತು ಎಂದು ನನಗೆ ಗೊತ್ತಿಲ್ಲ.

2. ಪ್ರಿಲಿಮಿನರಿ ರೆಕಾರ್ಡ್ ಎಂದರೆ ಏನು ಎಂದು ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. 1905 ರ ಮೇಲ್ಕಂಡ 4 ಜನರ ಹೆಸರಿಗೆ ಆದ ಕ್ರಯ ಪತ್ರಗಳನ್ನು ನಾನು ನೋಡಿರುವುದಿಲ್ಲ. ದಾವ ಸರ್ವೆ ನಂ. ಜಮೀನು

ಮೂಲತಃ ಮರಿಯಪ್ಪನಿಗೆ ಸೇರಿದ್ದು. ಪೂರ್ವಕ್ಕೆ ದೊಡ್ಡ ಹೊಳೆ, ಪಶ್ಚಿಮಕ್ಕೆ ಸರ್ವೆ ನಂ.6 ರ ಉಳಿಕೆ ಜಮೀನು, ಉತ್ತರಕ್ಕೆ ಕಿರಂಗೂರು ಎಲ್ಲೆ, ದಕ್ಷಿಣಕ್ಕೆ ತಿಮ್ಮಯ್ಯ ಮತ್ತು ಇತರರು ಮತ್ತು ಹಳ್ಳ ಕೊರಕು ಈ ಚೆಕ್ಕುಬಂದಿ ನೋಡಿದ್ದೀರ ಎಂದರೆ ಸಾಕ್ಷಿ ನೋಡಿದ್ದೇನೆ ಚೆಕ್ಕುಬಂದಿ ತಪ್ಪು ಬರೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಈ ಚೆಕ್ಕುಬಂದಿಯ ಒಳಗೆ 20 ಎಕರೆ 24 ಗುಂಟೆ (ಕರಾಬು ಸೇರಿ) ಜಮೀನು ಇದೆ ಎಂದರೆ ಸಾಕ್ಷಿ ಹೆಚ್ಚು ಕಡಿಮೆ ಇದೆ ಎಂದು ಉತ್ತರಿಸುತ್ತಾರೆ. ಯಾವುದೇ ಜಮೀನನ್ನು ಗುರುತು ಮಾಡಬೇಕಾದರೆ ಆ ಜಮೀನೀನ ಸುತ್ತ ಇರುವ ಚೆಕ್ಕುಬಂದಿ ನೋಡಿದರೆ ಮಾತ್ರ ಗುರುತಿಸಲು ಸಾಧ್ಯ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ.1905 ರ ಕ್ರಯ ಪತ್ರದಲ್ಲಿ ಈ ಮೇಲೆ ಹೇಳಿದ ಚೆಕ್ಕುಬಂದಿಯನ್ನು ಬರೆದಿರುವುದು ಎಂದರೆ ಸಾಕ್ಷಿ ಇಲ್ಲ ತಪ್ಪು ಬರೆದಿದ್ದಾರೆ ಎಂದು ಉತ್ತರಿಸುತ್ತಾರೆ. ನೀವು 1905 ರ ಕ್ರಯ ಪತ್ರ ನೋಡಿದಾಗ ಚೆಕ್ಕುಬಂದಿ ಏನಿದೆ ಎಂದರೆ ಸಾಕ್ಷಿ ಪೂರ್ವಕ್ಕೆ ಶಿಂಷಾ ನದಿ, ಪಶ್ಚಿಮಕ್ಕೆ ಚಿಕ್ಕೋನು ಅಲಿಯಾಸ್ ನಂಜಪ್ಪ, ಉತ್ತರಕ್ಕೆ ಕಿರಂಗೂರು ಎಲ್ಲೆ, ದಕ್ಷಿಣಕ್ಕೆ ಹಿಂದೆ ಮರಿಯಕ್ಕನ ಜಮೀನು ಈಗ ಪುಟ್ಟಸ್ವಾಮಿಯವರ ಜಮೀನು, ಇದು ನನ್ನ ಕ್ರಯ ಪತ್ರದ ಚೆಕ್ಕುಬಂದಿ. ನೀವು ದಕ್ಷಿಣದ ಚೆಕ್ಕುಬಂದಿ ಮಾತ್ರ ನಿಮ್ಮ ಕ್ರಯ ಪತ್ರದ ಚೆಕ್ಕುಬಂದಿ ಹೇಳುತ್ತಿದ್ದೀರ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಪಶ್ಚಿಮದ ಚೆಕ್ಕುಬಂದಿ ಚಿಕ್ಕೋನು ಅಲಿಯಾಸ್ ನಂಜಪ್ಪ ಇವರಿಗೆ ಜಮೀನು ಯಾರಿಂದ ಬಂತು ಎಂದರೆ ಸಾಕ್ಷಿ ಮರಿಯಕ್ಕನ ವಾರಸುದಾರರಿಂದ ಎಂದು ಉತ್ತರಿಸುತ್ತಾರೆ. ಅದನ್ನು 1977-78 ರಲ್ಲಿ ಖರೀದಿಸುತ್ತಾರೆ. ಚಿಕ್ಕೋನು ಅಲಿಯಾಸ್ ನಂಜಪ್ಪ ಕೊಂಡುಕೊಂಡಾಗ ಆ ಜಮೀನಿನ ಸರ್ವೆ ನಂ. ಏನು ಎಂದರೆ ಸಾಕ್ಷಿ ಸರ್ವೆ ನಂ.7 ಎಂದು ಉತ್ತರಿಸುತ್ತಾರೆ. 1905 ರ ಕ್ರಯ ಪತ್ರದಲ್ಲಿ ಪಶ್ಚಿಮದ ಚೆಕ್ಕುಬಂದಿ ನರಸಿಂಹ ಅವರ ಜಮೀನು ಎಂದು ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಹಾಗೆಯೇ ಆ ಕ್ರಯ ಪತ್ರದಲ್ಲಿ ದಕ್ಷಿಣಕ್ಕೆ ತಿಮ್ಮಯ್ಯ ಮತ್ತು ಇತರರು, ಹಳ್ಳ ಮತ್ತು ಕೊರಕಲು ಎಂದು ಇದೆ ಎಂದರೆ ಸಾಕ್ಷಿ ಅದು ತಪ್ಪು ಎಂದು ಉತ್ತರಿಸುತ್ತಾರೆ. 1905 ರ ಕ್ರಯ ಪತ್ರದ ಚೆಕ್ಕುಬಂದಿಯೊಳಗೆ ಇರುವ ಸ್ವತ್ತಿಗೆ ಸಂಬಂದಿಸಿದಂತೆಯೇ ಈ ವ್ಯಾಜ್ಯ ನಡೆಯುತ್ತಿದೆ ಎಂದರೆ ಸಾಕ್ಷಿ ಅಲ್ಲ ತಪ್ಪು ಬರೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಈ ದಾವೆಯಲ್ಲಿ ಹಾಕಿರುವ ಚೆಕ್ಕುಬಂದಿ ಯಾವ ಸರ್ವೆ ನಂಬರ್ ಜಮೀನಿನ ಚೆಕ್ಕು ಬಂದಿ ಎಂದು ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.ನಿಮ್ಮ ತಂದೆಯವರು ಕೊಂಡುಕೊಂಡಿರುವುದಾಗಿ ಹೇಳುವ ಜಮೀನು 1905 ರ ಕ್ರಯ ಪತ್ರದಲ್ಲಿ ಇರುವ ಚೆಕ್ಕುಬಂದಿಯೊಳಗೆ ಬರುತ್ತದೆಯೋ

ಅಥವಾ ಈ ದಾವೆಯಲ್ಲಿ ಇರುವ ಚೆಕ್ಕುಬಂದಿಯೊಳಗೆ ಬರುತ್ತದೆಯೋ ಎಂದರೆ ಸಾಕ್ಷಿ ಯಾವುದರಲ್ಲೂ ಬರುವುದಿಲ್ಲ ಎಂದು ಉತ್ತರಿಸುತ್ತಾರೆ. 1905ರಲ್ಲಿ ಹಳೆ ಹಳ್ಳಿ ಗ್ರಾಮದ ಗುಡ್ಡೇಗೌಡನ ಮಗ ಲಿಂಗ ಅಲಿಯಾಸ್ ಮೊಳ್ಳೆ, ನಿಂಗನ ಮಗ ಅಣ್ಣಯ್ಯ, ಪಟೇಲ್ ವೀರೇಗೌಡರ ಮಗ ನಂಜೇಗೌಡ, ಮತ್ತು ಗುಂಡೇಗೌಡನ ಮಗ ನಿಂಗ ಇವರೆಲ್ಲರೂ ಖರೀದಿಸಿರುವ ಕರಾಬು ಸೇರಿ 20 ಎಕರೆ 24 ಗುಂಟೆ ಜಮೀನಿಗೆ ಸಂಬಂದಿಸಿದಂತೆ ಈ 4 ದಾವೆಗಳು ನಡೆಯುತ್ತಿದೆ ಎಂದರೆ ಸಾಕ್ಷಿ ಅಲ್ಲ ಎಂದು ಉತ್ತರಿಸುತ್ತಾರೆ. ದಾವ ನಡೆಯುತ್ತಿರುವ ಸ್ವತ್ತಿನ ಚೆಕ್ಕುಬಂದಿ ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವ ನಡೆಯುತ್ತಿರುವ ಸ್ವತ್ತಿನ ಚೆಕ್ಕುಬಂದಿ ನಿಮಗೆ ಗೊತ್ತಿಲ್ಲದೇ ಇರುವ ಕಾರಣ 1905ರ ಕ್ರಯ ಪತ್ರದ ಚೆಕ್ಕುಬಂದಿಯು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಪುನಃ ಮುಂದುವರಿದು ತಪ್ಪು ಬರೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ದಾವ ನಡೆಯುತ್ತಿರುವ ಸ್ವತ್ತಿನ ಚೆಕ್ಕುಬಂದಿ ನಿಮಗೆ ಗೊತ್ತಿಲ್ಲದೇ ಇರುವ ಕಾರಣ 1905ರ ಕ್ರಯ ಪತ್ರದ ಚೆಕ್ಕುಬಂದಿಯು ನಿಮಗೆ ಗೊತ್ತಿಲ್ಲದ ಕಾರಣ ನಿಮ್ಮ ತಂದೆ ಖರೀದಿಸಿದಾಗಿ ಹೇಳುವ ಸ್ವತ್ತು ಯಾವ ಚೆಕ್ಕುಬಂದಿಯೊಳಗೆ ಬರುತ್ತದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಈ ಚೆಕ್ಕುಂದಿಯೊಳಗೆ ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವ ಚೆಕ್ಕೊಬಂದಿಯೊಳಗಿನ ವ್ಯಾಪ್ತಿಯಲ್ಲಾಗಲಿ, 1905ರ ಕ್ರಯ ಪತ್ರದ ಜಮೀನಿನ ಚೆಕ್ಕುಬಂದಿಯ ವ್ಯಾಪ್ತಿಯ ಒಳಗಾಗಲಿ ನೀವು ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿ ಇಲ್ಲ, ನಾವು ಸರ್ವೆ ನಂ.7ರಲ್ಲಿ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ಉತ್ತರಿಸುತ್ತಾರೆ. ದಾವ ಸರ್ವೆ ನಂಬರ್ ಜಮೀನುಗಳ ಚೆಕ್ಕುಬಂದಿ ಮತ್ತು 1905ರ ಕ್ರಯ ಪತ್ರದ ಜಮೀನಿನ ಚೆಕ್ಕುಬಂದಿ ಸರ್ವೆ ನಂ.7 ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ದಾವ ಸರ್ವೆ ನಂಬರ್ ಚೆಕ್ಕುಬಂದಿಯ ಸ್ವತ್ತಿನಲ್ಲಾಗಲಿ, 1905ರ ಕ್ರಯ ಪತ್ರದಲ್ಲಿ ಬರೆದಿರುವ ಚೆಕ್ಕುಬಂದಿಯಲ್ಲಾಗಲಿ ನಿಮ್ಮ ತಂದೆಗೆ ಕ್ರಯ ಪತ್ರ ಬರೆದುಕೊಟ್ಟಿರುವುದಾಗಿ ಹೇಳಿರುವ ವ್ಯಕ್ತಿಗಳಿಗೆ ಹಕ್ಕಾಗಲಿ, ಸ್ವಾಧೀನವಾಗಲಿ ಇರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಗೆ ಕ್ರಯ ಪತ್ರ ಬರೆದುಕೊಟ್ಟಿರುವವರಿಗೆ ಹಕ್ಕು ಮತ್ತು ಸ್ವಾಧೀನ ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎಂದು ಉತ್ತರಿಸುತ್ತಾರೆ. ಸರ್ವೆ ನಂ.6 ಇದ್ದದ್ದು ಸರ್ವೆ ನಂ.7 ಎಂದು 1911ರಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ಸರ್ವೆ ನಂ.6 ಬೇರೆ ನಂಬರ್ ಮತ್ತು ಸರ್ವೆ ನಂ.7 ಬೇರೆ ನಂಬರ್ ಎಂದು ಉತ್ತರಿಸುತ್ತಾರೆ. ಸರ್ವೆ ನಂ.7/1, 7/2 ಎಂದು ಪೋಡಾದಂತಹ ಸಂರ್ದಬದಲ್ಲಿ ಡೆಪ್ಯೂಟಿ ಕಮಿಷನರ್ ಅವರ

ನ್ಯಾಯಾಲಯದಲ್ಲಿ ಕೇಸು ಇತ್ತು ಎಂದರೆ ಸಾಕ್ಷಿ ಕೇಸು ತೀರ್ಮಾನವಾದ ಮೇಲೆ ಆಗಿದ್ದು ಎಂದು ಉತ್ತರಿಸುತ್ತಾರೆ. ಯಾವಾಗ ಕೇಸು ತೀರ್ಮಾನವಾಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಪೋಡು ಯಾವಾಗ ಆಯಿತು ಎಂದರೆ ಸಾಕ್ಷಿ 2013-14 ನೇ ಸಾಲಿನಲ್ಲಿ ಎಂದು ಉತ್ತರಿಸುತ್ತಾರೆ. ಕಂದಾಯ ಅಧಿಕಾರಿಗಳ ನ್ಯಾಯಾಲಯದಲ್ಲಿ ಕೇಸು ಇರುವಾಗಲೆ ಸರ್ವೆ ನಂ.7/1 ಮತ್ತು 7/2 ಎಂದು ಸುಳ್ಳು ಪೋಡು ಮಾಡಿಸಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ.7/1 ಮತ್ತು 7/2 ಎಂದು ಇರುವ ದಾಖಲಾತಿಗಳು ಸೃಷ್ಟಿಸಿಕೊಂಡ ದಾಖಲಾತಿಗಳು ಎಂದರೆ ಸಾಕ್ಷಿ ಸರಿಯಲ್ಲ. ಸರ್ವೆ ನಂ.7/1 ಮತ್ತು 7/2 ಎಂದು ನೀವು ಹೇಳುತ್ತಿರುವ ಜಮೀನುಗಳು ದಾವ ಸರ್ವೆ ನಂಬರ್ ಜಮೀನುಗಳು ಎಂದರೆ ಸಾಕ್ಷಿ ಅಲ್ಲ ಎಂದು ಉತ್ತರಿಸುತ್ತಾರೆ. ಪುಟ್ಟಸ್ವಾಮಿಯವರು ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೋ ಅಥವ ಬೇರೆ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರ ಎಂದರೆ ಸಾಕ್ಷಿ ಈ ದಾವ ಸ್ವತ್ತಿನಲ್ಲಿಯೇ ಸ್ವಾದೀನದಲ್ಲಿ ಇದಾದರೆ ಎಂದು ಉತ್ತರಿಸುತ್ತಾರೆ. 1905 ರ ಕ್ರಯ ಪತ್ರದ ಚೆಕ್ಕುಬಂದಿಯಲ್ಲಿ ಪುಟ್ಟಸ್ವಾಮಿಯವರು ಸ್ವಾಧೀನದಲ್ಲಿ ಇದ್ದಾರ ಇಲ್ಲವೊ ಎಂದರೆ ಸಾಕ್ಷಿ ಸ್ವಾಧೀನದಲ್ಲಿ ಇದ್ದಾರೆ ಆದರೆ ಚೆಕ್ಕುಬಂದಿ ತಪ್ಪಾಗಿ ಬರೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ತಪ್ಪಾಗಿ ಬರೆದುಕೊಂಡಿರುವುದಾಗಿ ಹೇಳುವ ಚೆಕ್ಕುಬಂದಿಯಲ್ಲಿ ಪುಟ್ಟಸ್ವಾಮಿಯವರು ಇದ್ದಾರ ಎಂದರೆ ಸಾಕ್ಷಿ ಹೌದು ಸ್ವಾಧೀನದಲ್ಲಿ ಇದ್ದಾರೆ ವಾದಿಗಳು ತಪ್ಪಾಗಿ ಚೆಕ್ಕುಬಂದಿ ಬರೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ದಾವೆಯಲ್ಲಿ ನಮೂದಿಸಿರುವ ಚೆಕ್ಕುಬಂದಿಯಲ್ಲಿ ಪುಟ್ಟಸ್ವಾಮಿಯವರು ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿ ಇದ್ದಾರೆ ಎಂದು ಉತ್ತರಿಸುತ್ತಾರೆ. ವಾದಿಯರು ದಾಖಲಿಸಿರುವ 4 ಕೇಸುಗಳಲ್ಲಿ ನಮೂದಿಸಿರುವ ಚೆಕ್ಕುಬಂದಿಯಲ್ಲಿ 4 ಜನ ವಾದಿಯರು ಸ್ವಾಧೀನದಲ್ಲಿ ಇದ್ದಾರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಹಾಜರು ಪಡಿಸಿರುವ ದಿ. 05.07.1965 ರ ಕ್ರಯ ಪತ್ರ 1905 ರಲ್ಲಿ ನಮೂದಿರುವ ಚೆಕ್ಕುಬಂದಿಯ ವ್ಯಾಪ್ತಿಯ ಒಳಗಡೆ ಜಮೀನಿನ ಸ್ವತ್ತಿಗೆ ಸಂಬಂದಿಸಿದ್ದಲ್ಲಾ ಎಂದರೆ ಸಾಕ್ಷಿ ಆ ಚೆಕ್ಕುಬಂದಿ ವ್ಯಾಪ್ತಿಯಲ್ಲಿಯೇ ನಮ್ಮ ಜಮೀನು ಬರುತ್ತದೆ ಆದರೆ ಆ ಪತ್ರದಲ್ಲಿ ಚೆಕ್ಕುಬಂದಿ ತಪ್ಪಾಗಿ ಬರೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಡಿ 81-83 ದಾಖಲಾತಿಗಳು ನೀವು ಹಾಜರು ಪಡಿಸಿರುವ

ನಿಡಿ80ರ ಕ್ರಯ ಪತ್ರದ ಆದಾರದ ಮೇಲೆ ಯಾಂತ್ರೀಕೃತವಾಗಿ ಬರೆದಿರುವ ದಾಖಲಾತಿಗಳು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸಹ ಸ್ವಾಧೀನದಲ್ಲಿ ಇರುವುದಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.